# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಸಿ.ಆರ್.5/2006-07 ದಿನಾಂಕ:22-09-2006

## -:: ಮರು ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಕೆಲವು ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳವರು ತಮ್ಮ ಶೇಕಡವಾರು ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿದ ಜೊತೆಗೆ ನಿಗಧಿಪಡಿಸಿರುವ ಇ.ಎಂ.ಡಿ. ಹಣವನ್ನು ಡಿ.ಡಿ ಅಥವಾ ಕಛೇರಿಯಲ್ಲಿ ಪಾವತಿ ಮಾಡಿದ ನಗದು ರಶೀದಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ: 10-10-2006ರಂದು ಸಂಜೆ 4.00ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಹಾಗೂ ಷರತ್ತುಗಳು ಕಛೇರಿಯ ನಾಮಫಲಕದಲ್ಲಿ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದು.

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ:03-10-2006
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ:05-10-2006
3) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ:10-10-2006
4) ಭರ್ತಿ ಮಾಡಿದ ಟೆಂಡರ್ ಫಾರಂ ಶುಲ್ಕ ರೂ.250/-ಗಳು (ಮಾರಾಟ ಶುಲ್ಕ ಸೇರಿ)
5) ಪ್ರತಿ ಕಾಮಗಾರಿ ಮುಗಿಸಲು ನೀಡಿರುವ ಕಾಲಾವಧಿ : 2ತಿಂಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ.ಎಂ.ಡಿ. ಮೊತ್ತ |
|---|---|---|---|
| 1 | 3ನೇ ವಾರ್ಡ್ ಮುತ್ಸಂದ್ರದಲ್ಲಿ ನಗರಸಭೆ ಕೊಳವೆ ಬಾವಿ ಪಕ್ಕದ ರಸ್ತೆಯಿಂದ ಕೆ.ಎಸ್.ಆರ್.ಟಿ.ಸಿ. ನರಸಿಂಹಮೂರ್ತಿ ಮನೆವರೆಗೆ ಹಾಗೂ ಕೊಳವೆಬಾವಿ ಎರಡನೇ ರಸ್ತೆಯಿಂದ ತುಮ್ಮಲಪ್ಪ ನವರ ಮನೆಯವರೆಗೆ ರಸ್ತೆಯ ಎರಡೂ ಕಡೆಗಳಲ್ಲಿ ಕಲ್ಲುಚಪ್ಪಡಿ ಚರಂಡಿ ಹಾಗೂ ಕಲ್ವರ್ಟ್ ನಿರ್ಮಿಸುವ ಕೆಲಸ. | 160000.00 | 4000.00 |
| 2 | ವಾರ್ಡ್ ನಂ.1ರ ಶ್ರೀ. ರಾಜಶೇಖರಯ್ಯರವರ ಮನೆ ಮುಂದೆ ಚರಂಡಿ ನಿರ್ಮಿಸುವ ಕಾಮಗಾರಿ. | 20000.00 | 500.00 |

**ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿಗೆ ಟೆಂಡರ್‌ನೊಂದಿಗೆ ಸಲ್ಲಿಸಬೇಕು, ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2) ಟೆಂಡರ್ ಲಕೋಟೆಯ ಮೇಲೆ ಕಾಮಗಾರಿ ಹೆಸರು ಮತ್ತು ಕ್ರಮ ಸಂಖ್ಯೆಯನ್ನು ನಮೂದಿಸಿರಬೇಕು.
3) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.
4) ಕಛೇರಿಯ ಮೇಲಾಧಿಕಾರಿಗಳು ನೀಡುವ ಸುತ್ತೋಲೆಗಳಿಗೆ ಗುತ್ತಿಗೆದಾರರು ಬದ್ದರಾಗಿರುತ್ತಕ್ಕದ್ದು.
5) ಟೆಂಡರ್‌ದಾರರು ಎಸ್.ಆರ್. ದರಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ ಇದರ ವ್ಯತ್ಯಾಸದ ಮೊತ್ತವನ್ನು ಠೇವಣಿ ಜೊತೆಯಲ್ಲಿ ಟೆಂಡರ್ ಫಾರಂ ಸಲ್ಲಿಸತಕ್ಕದ್ದು.

| | | |
|---|---|---|
| **ಸಹಿ:-** | **ಸಹಿ:-** | **ಸಹಿ:-** |
| **(ಶಾಂತಮ್ಮ)** | **(ವಿ.ರಾಜಪ್ಪ)** | **(ಚಿಕ್ಕಣ್ಣ)** |
| **ಅಧ್ಯಕ್ಷರು,** | **ಉಪಾಧ್ಯಕ್ಷರು,** | **ಪೌರಾಯುಕ್ತರು,** |
| **ನಗರಸಭೆ, ದೊಡ್ಡಬಳ್ಳಾಪುರ.** | **ನಗರಸಭೆ, ದೊಡ್ಡಬಳ್ಳಾಪುರ.** | **ನಗರಸಭೆ, ದೊಡ್ಡಬಳ್ಳಾಪುರ.** |

**" ನಕಲು ಪ್ರತಿ "**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**